Downloaded From : http://cbseportal.com/

**SET – 4**

**Series : HRK/C**

**Code No. 13**

रोल नं.
**Roll No.**

Candidates must write the Code on the title page of the answer-book.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **9** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# SUMMATIVE ASSESSMENT - II

# ಕನ್ನಡ

# KANNADA

ಅನುಮತಿಸಲಾದ ಸಮಯ : **3** ಗಂಟೆ | ಗರಿಷ್ಠ ಅಂಕಗಳು : **90**

*Time allowed : 3 hours* | *Maximum Marks : 90*

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು **A, B, C** ಮತ್ತು **D** ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

ವಿಭಾಗ – **A** (ವಾಚನ ಮತ್ತು ಗ್ರಹಿಕಾ ಕೌಶಲ) : **12** ಅಂಕಗಳು

ವಿಭಾಗ – **B** (ಬರವಣಿಗೆ ಕೌಶಲ) : **14** ಅಂಕಗಳು

ವಿಭಾಗ – **C** (ಅನ್ವಯಿಕ ವ್ಯಾಕರಣ) : **14** ಅಂಕಗಳು

ವಿಭಾಗ – **D** (ಪಠ್ಯಗಳ ಅಧ್ಯಯನ) : **50** ಅಂಕಗಳು



Downloaded From : http://cbseportal.com/ Courtesy : CBSE

Downloaded From : http://cbseportal.com/

## ವಿಭಾಗ – A

### (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

I. 1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.

"ಪರೋಪಕಾರ ಪುಣ್ಯಾಯ, ಪಾಪಾಯ ಪರಪೀಡನಂ" ಎಂದು ಸೂಕ್ತಿ ಹೇಳುತ್ತದೆ. ಮಾನವ ಜನ್ಮವು ಸಾಫಲ್ಯತೆಯನ್ನು ಪಡೆಯಬೇಕಾದರೆ ಸ್ವಾರ್ಥರಹಿತ ಪರೋಪಕಾರ, ದೇಶಸೇವೆ ಅತ್ಯವಶ್ಯ. ಈ ದಿಸೆಯಲ್ಲಿ ನಮಗೆ ಸ್ವಾತಂತ್ರ್ಯ ದೊರಕಿಸಿಕೊಡಲು ಬ್ರಿಟೀಷರ ಲಾಠಿ ಮತ್ತು ಗುಂಡೇಟುಗಳನ್ನು ಸಹಿಸಿದ ಮಹಾನುಭಾವರ ಸೇವೆ ಅವಿಸ್ಮರಣೀಯ.

ಪರೋಪಕಾರದ ಮಹತ್ವವನ್ನು ಮಹಾಭಾರತದ ಕಥೆಯೊಂದು ಹೀಗೆ ಪುಷ್ಟೀಕರಿಸುತ್ತದೆ : ಮಹಾಭಾರತದ ಘೋರ ಸಂಗ್ರಾಮದಲ್ಲಿ ಅರ್ಜುನನ ಕುದುರೆಗಳು ಬಾಯಾರಿದಾಗ, ಅರ್ಜುನನು ಯುದ್ಧದಲ್ಲಿ ಹೋರಾಡಿ ದಣಿದಿದ್ದಾನೆಂದು ಶ್ರೀಕೃಷ್ಣನು ನಿಂತಲ್ಲೇ ಜಲಧಾರೆಯನ್ನು ಸೃಷ್ಟಿಸಿ ಕುದುರೆಗಳ ತೃಷೆಯನ್ನು ತಣಿಸಿದನಂತೆ.

ಅದೇ ರೀತಿ ಪ್ರಕೃತಿಯಲ್ಲೂ, ಮಾತು ಬಾರದ ಪಶುಪಕ್ಷಿಗಳಲ್ಲೂ ಪ್ರತಿಫಲಾಪೇಕ್ಷೆಯಿಲ್ಲದ ಸೇವಾ ಮನೋಭಾವವನ್ನು ಕಾಣಬಹುದು. ತೆಂಗಿನ ಗಿಡವು ಚಿಕ್ಕದಿದ್ದಾಗ ನಾವು ನೀರೆರೆದ ಕೃತಜ್ಞತೆಯನ್ನು ಸ್ಮರಿಸುತ್ತಾ ಅದು ಬದುಕಿರುವವರೆಗೂ ನಮಗೆ ಎಳನೀರನ್ನು ನೀಡುತ್ತದೆ ; ಹಸು ಕಸ-ಕಡ್ಡಿ ತಿಂದು ನಮಗೆ ಅಮೃತವನ್ನೀಯುತ್ತದೆ ; ನಾಯಿ ಮನೆ ಬಾಗಿಲು ಕಾಯುತ್ತಾ ಒಡೆಯನನ್ನು ರಕ್ಷಿಸುತ್ತದೆ.

ಹೀಗಿರುವಾಗ ಜೀವಿಗಳಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಮಾನವರಾದ ನಮ್ಮ ಕರ್ತವ್ಯವೇನು ? ನಾವು ಮತ್ತೊಬ್ಬರ ಸುಖ ದುಃಖಗಳಿಗೆ ಸ್ಪಂದಿಸಬೇಕು. ದೀನ-ದಲಿತರು, ಅಸಹಾಯಕರು, ರೋಗಿಗಳು ಮುಂತಾದವರನ್ನು ಕಂಡಾಗ ಸಹಾಯ ಹಸ್ತ ನೀಡಬೇಕು. ಆಗ ಮಾತ್ರ 'ಜನಸೇವೆ ಜನಾರ್ಧನ ಸೇವೆ' ಯಾಗಿ ನಮ್ಮ ಜೀವನ ಸಾರ್ಥಕವಾಗುತ್ತದೆ.



Downloaded From : http://cbseportal.com/ Courtesy : CBSE

Downloaded From : http://cbseportal.com/

ಪ್ರಶ್ನೆಗಳು :

(ಅ) ನಮಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡಲು ದೇಶಭಕ್ತರು ಯಾವ ಕಷ್ಟವನ್ನು ಅನುಭವಿಸಬೇಕಾಯಿತು ? **1**

(ಆ) ಕೃಷ್ಣನು ಅರ್ಜುನನ ಕುದುರೆಗಳ ಬಾಯಾರಿಕೆಯನ್ನು ಹೇಗೆ ತಣಿಸಿದನು ? **1**

(ಇ) ಪ್ರಕೃತಿ ಮತ್ತು ಪ್ರಾಣಿಗಳು ಹೇಗೆ ಉಪಕಾರಿಯಾಗಿವೆ ? ಉದಾಹರಣೆಯೊಂದಿಗೆ ವಿವರಿಸಿ. **2**

(ಈ) ನಾವು ಜನಾರ್ಧನನ ಸೇವೆಯನ್ನು ಹೇಗೆ ಮಾಡಬೇಕು ? **2**

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಇಲ್ಲ, ನನಗೆ ಖಂಡಿತ ಇಲ್ಲ
ಆ ಸ್ವರ್ಗ ಲೋಕದ ಬಯಕೆ ;
ನಿಜ ಹೇಳಬೇಕೆಂದರೆ
ಕಿಚ್ಚು ಹಚ್ಚಲೇ ಬೇಕು ಆ ಸ್ವರ್ಗಕ್ಕೆ.

ಅಲ್ಲಿ ನಮ್ಮ ಪುರಾಣಗಳ ಪ್ರಕಾರ
ಹಸಿವಾಗುವುದೇ ಇಲ್ಲ ;
ಬಾಯಾರಿಕೆಯೂ ಇಲ್ಲ.
ಇಂಥ ಹಸಿವಿರದ, ತೃಷೆಯಿರದ
ಬದುಕು, ಬದುಕೇ ಅಲ್ಲ.



Downloaded From : http://cbseportal.com/ Courtesy : CBSE

Downloaded From : http://cbseportal.com/

ಮೇಲಿನ ಆ ಸ್ವರ್ಗದಲ್ಲಿ
ದೇವತೆಗಳು ಕಣ್ಣು ಮಿಟುಕಿಸುವುದಿಲ್ಲ.
ಬಿಟ್ಟ ಕಣ್ಣು ಬಿಟ್ಟಂತೆಯೇ ಇರುವ
ಯಾರನ್ನಾದರೂ ನೋಡುವುದು
ನಿಜವಾಗಿಯೂ ಸಂತೋಷವಲ್ಲ.

ಹೊಟ್ಟೆ ತುಂಬಿದವರ ಆ ಸ್ವರ್ಗದಲ್ಲಿ
ಹೊಟ್ಟೆ ಕಿಚ್ಚಿಗೂ ಕೂಡ ಬರಗಾಲವಿಲ್ಲ.
ಪುರಾಣಗಳ ಪ್ರಕಾರ, ಸದಾ ಅಭದ್ರ
ಸಿಂಹಾಸನ, ಪದವಿಯ ಭದ್ರತೆಗಾಗಿ
ದೇವೇಂದ್ರನಾಡಿದಾಟಕ್ಕೆ ಲೆಕ್ಕವೇ ಇಲ್ಲ.

ಸೂರ್ಯ, ಚಂದ್ರರಾ ಬೆಳಕು
ನದ, ನದಿಗಳಾ ತಳಕು
ಬೆಟ್ಟ, ಗುಡ್ಡ ಝರಿಗಳಾ ಹೊಳಪು
ಭೂರಮೆಯ ಹಚ್ಚ ಹಸಿರಿನ ಒನಪು
ನಮಗಿರಲು ಸ್ವರ್ಗವಾದರೂ ಏಕೆ ಬೇಕು ?

**ಪ್ರಶ್ನೆಗಳು :**

(ಅ) ಕವಿಯು ಸ್ವರ್ಗಕ್ಕೆ ಏನು ಹಚ್ಚಬೇಕೆಂದು ಹೇಳುತ್ತಾರೆ ? **1**

(ಆ) ಕವಿಗೆ ಸಂತೋಷ ನೀಡದ ವಿಷಯ ಯಾವುದು ? **1**

(ಇ) ಸ್ವರ್ಗದಲ್ಲಿನ ಬದುಕು ಹೇಗಿರುತ್ತದೆಂದು ಕವಿ ಹೇಳಿದ್ದಾರೆ ? **2**

(ಈ) ಭೂಮಿಯ ಮೇಲೆ ಯಾವ ಸಂತೋಷವಿದೆ ? **2**



Downloaded From : http://cbseportal.com/ Courtesy : CBSE

Downloaded From : http://cbseportal.com/

## ವಿಭಾಗ – B

### (ಬರವಣಿಗೆ ಕೌಶಲ) : 14 ಅಂಕಗಳು

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು **150** ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ. **6**

(ಅ) "ಹಳ್ಳಿಯ ಜೀವನ ಶೈಲಿ ಆರೋಗ್ಯಕ್ಕೆ ಹಿತಕಾರಿ."

(ಆ) "ನೈತಿಕತೆಯ ಬುನಾದಿಯಿಲ್ಲದ ಸಾಕ್ಷರತೆ ವ್ಯರ್ಥ."

(ಇ) "ಕತ್ತಿಗಿಂತ ಲೇಖನಿ ಹರಿತ."

III. ನಿಮ್ಮ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೊಂದನ್ನು ತೆರೆಯುವಂತೆ ವಿನಂತಿಸಿ ಆರೋಗ್ಯ ಸಚಿವರಿಗೆ ಪತ್ರವನ್ನು ಬರೆಯಿರಿ : **4**

**ಅಥವಾ**

'ಲಾಲ್ ಬಹಾದ್ದೂರ್ ಶಾಸ್ತ್ರಿ ಪದವಿ ಪೂರ್ವ ಕಾಲೇಜು, ಚೆನ್ನಮ್ಮ ರಾಣಿ ವೃತ್ತ, ಬೆಳಗಾವಿ' – ಇಲ್ಲಿಗೆ ವಿಜ್ಞಾನ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಿ.

IV. ಮಂಗಳೂರಿನಲ್ಲಿ ನಡೆದ 'ಯಕ್ಷಗಾನ, ಬಯಲಾಟ ಕಲಾ ಮಂಡಳಿ' ಯ ಉದ್ಘಾಟನಾ ಸಮಾರಂಭದ ವರದಿಯನ್ನು ತಯಾರಿಸಿ. **4**

## ವಿಭಾಗ – C

### (ಅನ್ವಯಿಕ ವ್ಯಾಕರಣ) : 14 ಅಂಕಗಳು

V. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ. **2**

(i) ಕಾದಾಟದಾಟ (ii) ಪ್ರತ್ಯುತ್ತರ



Downloaded From : http://cbseportal.com/ Courtesy : CBSE

Downloaded From : http://cbseportal.com/

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ. **2**

(i) ಕಡೆಗಣ್ಣು (ii) ಮೇದಿನೀಪತಿ

3. ಕೆಳಗಿನ ಪಡೆನುಡಿಯನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ. **1**

'ಅರಣ್ಯರೋಧನ'

4. ಕೆಳಗಿನ ಪದಗಳ ತತ್ಸಮ / ತದ್ಭವ ರೂಪವನ್ನು ಬರೆಯಿರಿ. **1**

(i) ಹಸಾದ (ii) ಸ್ಥಾನ

5. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. **1**

(i) ಕೃತಜ್ಞ (ii) ದೋಷಿ

6. ಕೆಳಗಿನ ಪದಗಳಿಗೆ ಜೋಡುನುಡಿಯನ್ನು ಬರೆಯಿರಿ. **1**

(i) ಸಿರಿ (ii) ಗೆಡ್ಡೆ

7. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದವನ್ನು ಬರೆಯಿರಿ. **1**

(i) ರಿಪು (ii) ತಮ

8. ಈ ವಾಕ್ಯವನ್ನು ನಿಷೇಧಾರ್ಥಕ ರೂಪಕ್ಕೆ ಪರಿವರ್ತಿಸಿ. **1**

"ಸಂಚಾರಿ ದೂರವಾಣಿಯ ಸಂಶೋಧನೆ ನಮಗೆ ವರದಾನವಾಗಿದೆ."

9. ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಾಯಿಸಿ. **1**

"ಭೀಮನು ಬಲಗಾಲಿನಿಂದ ಚೆಂಡನ್ನು ಒದ್ದನು."

10. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ. **1**

(i) ಹಣ್ಣನ್ನು : ಕರ್ಮಪದ :: ತಿಂದನು :

(ii) ಪಳಪಳ : ಅನುಕರಣ ವಾಚಕ :: ಮುಂದೆ ಮುಂದೆ :



Downloaded From : http://cbseportal.com/ Courtesy : CBSE

Downloaded From : http://cbseportal.com/

11. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ. **2**

(i) "ಕಬ್ಬು ಡೊಂಕಾದರೆ ಅದರ ಸಿಹಿ ಡೊಂಕೇ ?"

(ii) "ಹೊತ್ತು ಕಳೆದರೆ ಹೋಯಿತು ; ಮುತ್ತು ಒಡೆದರೆ ಹೋಯಿತು."

## ವಿಭಾಗ – D

### (ಪಠ್ಯಗಳ ಅಧ್ಯಯನ) : 50 ಅಂಕಗಳು

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **1 × 14 = 14**

1. ವಿಶ್ವೇಶ್ವರಯ್ಯನವರು ಪೂನಾದ ಈ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು :

(i) ಕೃಷ್ಣರಾಜಸಾಗರ ಜಲಾಶಯಕ್ಕೆ (ii) ಮೆಟ್ಟೂರು ಜಲಾಶಯಕ್ಕೆ

(iii) ಫೀಫ್ ಜಲಾಶಯಕ್ಕೆ (iv) ಭದ್ರಾ ಜಲಾಶಯಕ್ಕೆ

2. ವಿಶ್ವೇಶ್ವರಯ್ಯನವರು ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಈ ಬಹುಮಾನವನ್ನು ಪಡೆದರು :

(i) ಜೇಮ್ಸ್ ಬರ್ಕ್ಲಿ (ii) ನಾಥಮುನಿ ನಾಯ್ಡು

(iii) ರಂಗಾಚಾರ್ಲು (iv) ಲಾರ್ಡ್ ಸಂಡ್ ಹರ್ಸ್ಟ್

3. ಗೌತಮ ಬುದ್ಧನ ಮೊದಲ ಹೆಸರು ________.

(i) ಶುದ್ಧೋದನ (ii) ಸಿದ್ಧಾರ್ಥ

(iii) ಉದ್ದಾಮಕ (iv) ಸುಕುಮಾರ

4. ದೇವನೂರರು ಇವರನ್ನು 'ನನ್ನ ದೇವರು' ಎಂದು ಹೇಳಿದ್ದಾರೆ.

(i) ಅಂಬೇಡ್ಕರರನ್ನು (ii) ವೇದ ವ್ಯಾಸರನ್ನು

(iii) ಗಾಂಧೀಜಿಯವರನ್ನು (iv) ಕಾರುಣ್ಯ, ಸಮತೆಯ ಬುದ್ಧನನ್ನು



Downloaded From : http://cbseportal.com/ Courtesy : CBSE

Downloaded From : http://cbseportal.com/

5. ‘ವೃಕ್ಷಸಾಕ್ಷಿ’ ಗದ್ಯಪಾಠದ ಆಕರ ಗ್ರಂಥ :

(i) ವಡ್ಡಾರಾಧನೆ (ii) ದುರ್ಗಸಿಂಹನ ಕರ್ಣಾಟಕ ಪಂಚತಂತ್ರ

(iii) ಗುಣಾಢ್ಯನ ಬೃಹತ್ಕತೆ (iv) ಬಾಸನ ವಟವೃಕ್ಷಗಳು

6. “ಈತನ ಮಾತು ಅಶ್ರುತ ಪೂರ್ವಮ್” ಎಂದವರು :

(i) ಧರ್ಮಬುದ್ಧಿ (ii) ಧರ್ಮಾಧಿಕರಣರು

(iii) ದುಷ್ಟಬುದ್ಧಿ (iv) ಪ್ರೇಮಮತಿ

7. ಖಿರ್ದಿ ಪುಸ್ತಕ ಶಾನುಭೋಗರಿಗೆ ಕೇವಲ ಜೀವನದ ಆಧಾರವಲ್ಲ ; ಅದು ಅವರ ________ ಲಾಂಛನವಾಗಿತ್ತು.

(i) ಸಾಮರ್ಥ್ಯದ (ii) ಪ್ರಾಮಾಣಿಕತೆಯ

(iii) ರಾಜಭಕ್ತಿಯ (iv) ಧರ್ಮದ

8. ಬರಡಾಗಿರುವ ಕಾಡುಮೇಡುಗಳಿಗೆ ನಾವು ಈ ರೀತಿ ತಲುಪೋಣ ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

(i) ಸೂರ್ಯ ರಶ್ಮಿಯಾಗಿ (ii) ಮಂದ ಮಾರುತವಾಗಿ

(iii) ವಸಂತ ಕಾಲವಾಗಿ (iv) ಕುಬೇರನಾಗಿ

9. ಕವಿ ಜಿ.ಎಸ್. ಶಿವರುದ್ರಪ್ಪನವರು ಈ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ :

(i) ಆದಿ ಕವಿ (ii) ಕವಿ ದಿಗ್ಗಜ

(iii) ಕವಿ ಪುಂಗವ (iv) ನಾಡೋಜ



Downloaded From : http://cbseportal.com/ Courtesy : CBSE

Downloaded From : http://cbseportal.com/

10. 'ಗದುಗಿನ ಭಾರತ' ಕ್ಕೆ ಇರುವ ಪರ್ಯಾಯ ಹೆಸರು :

(i) ಕುಮಾರವ್ಯಾಸ ಭಾರತ (ii) ನಡುಗನ್ನಡ ಭಾರತ

(iii) ಪಂಪ ಭಾರತ (iv) ಹಳಗನ್ನಡ ಭಾರತ

11. ಕುಂತಿಗೆ ಮಂತ್ರಬಲದಿಂದ ಮೂರನೆಯ ಮಗನಾಗಿ ಇವರು ಜನಿಸಿದರು :

(i) ಕರ್ಣ (ii) ಅರ್ಜುನ

(iii) ಭೀಮ (iv) ಸಹದೇವ

12. ವಾಲ್ಮೀಕಿ ಮಹರ್ಷಿಗೆ ಆ ಹೆಸರು ಬರಲು ಕಾರಣ :

(i) ತಾಯಿಯು ಪ್ರೀತಿಯಿಂದ ಕರೆದ ಹೆಸರಾದುದರಿಂದ

(ii) ಮೈಸುತ್ತ ಬೆಳೆದ ಹುತ್ತದಿಂದ ಅವರು ಹೊರಬಂದದ್ದರಿಂದ

(iii) ವಲ್ಮೀಕ ಪಕ್ಷಿಯನ್ನು ಬೇಟೆಯಾಡಿದ್ದರಿಂದ

(iv) ರಾಮಾಯಣ ಮಹಾಕಾವ್ಯವನ್ನು ಬರೆದಿದ್ದರಿಂದ

13. ಲವನು ಕುದರೆಯನ್ನು ಇದರಿಂದ ಕಟ್ಟಿಹಾಕಿದನು :

(i) ಹಗ್ಗದಿಂದ (ii) ಉತ್ತರೀಯದಿಂದ

(iii) ಚರ್ಮದ ಪಟ್ಟಿಯಿಂದ (iv) ಬಳ್ಳಿಯಿಂದ

14. ಮಾನವನ ಕಾದಾಟಕ್ಕೆ ಇದು ಕಾರಣವೆಂದು ದು. ಸರಸ್ವತಿ ಹೇಳಿದ್ದಾರೆ :

(i) ಅಭಿಮಾನ (ii) ಹಮ್ಮು

(iii) ಜಿಪುಣತನ (iv) ಒಗ್ಗಟ್ಟು



Downloaded From : http://cbseportal.com/ Courtesy : CBSE

Downloaded From : http://cbseportal.com/

VII. ಕೆಳಗಿನ ಪ್ರಶ್ನೆಗಳಿಗೆ **2-3** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : **2 × 4 = 8**

1. ಜೋಡಿ ಪಾರಿವಾಳಗಳು ಎಲ್ಲಿ ಮತ್ತು ಹೇಗೆ ಬಾಳುತ್ತಿದ್ದವು ?

2. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ" – ಈ ಮಾತು ಪಾರಿವಾಳಗಳಿಗೆ ಹೇಗೆ ಅನ್ವಯಿಸುತ್ತದೆ ?

3. "ಬಗಲಲ್ಲಿ ಕಕ್ಕುವುದು, ಬಾಯಲ್ಲಿ ತಿಂಬೂದು" – ಈ ಒಗಟಿನ ಅರ್ಥವನ್ನು ವಿವರಿಸಿ.

4. ಒಗಟುಗಳಿಂದಾಗುವ ಪ್ರಯೋಜನಗಳಾವುವು ?

VIII. ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **3 × 6 = 18**

1. ಜವಾಹರಲಾಲ್ ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?

2. ಖಿರ್ದಿ ಪುಸ್ತಕವೆಂದರೇನು ? ಅದು ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳುವಲ್ಲಿ ಯಾವ ಪಾತ್ರವನ್ನು ವಹಿಸಿತು ?

3. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

   "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯವೇ ಸರಿ."

   **ಅಥವಾ**

   "ನಾನು ಮುಖ ಮೇಲಾಗಿ ಬಿದ್ದಿದ್ದೇನೇ ?"

4. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

5. ಸಂಕಟ ಮತು ದುಃಖಕ್ಕೆ ಭೇದಭಾವವಿಲ್ಲವೆಂದು ಕವಯಿತ್ರಿ ಹೇಗೆ ವಿವರಿಸಿದ್ದಾರೆ ?



Downloaded From : http://cbseportal.com/ Courtesy : CBSE

Downloaded From : http://cbseportal.com/

6. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.

"ಅರಸುಗಳ ವಾಜಿಯಂ ಬಿಡು."

**ಅಥವಾ**

"ಜೀವ ತೆತ್ತವರು ವೀರ ಮರಣ ಹೊಂದಿದರು."

IX. ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ. **$5 \times 2 = 10$**

1. ಮನೆ ಮಂಚಮ್ಮ ಕತೆಯನ್ನು ಹಾಗೂ ಅದರಿಂದ ನಮಗೆ ತಿಳಿದು ಬರುವ ನೀತಿಯನ್ನು ತಿಳಿಸಿ.

**ಅಥವಾ**

"ಸುಳ್ಳು-ಕಪಟದಿಂದ ಎಂದಿಗೂ ಸುಖವಿಲ್ಲ" – ಎಂಬ ಮಾತು ದುಷ್ಟಬುದ್ಧಿಗೆ ಹೇಗೆ ಅನ್ವಯಿಸುತ್ತದೆ ? ವಿವರಿಸಿ.

2. ಸಂಕಲ್ಪ ಮತ್ತು ಅನುಷ್ಠಾನದ ಬಗೆಗೆ ಕವಿ ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**ಅಥವಾ**

"ಸ್ನೇಹಕ್ಕೆ ಇನ್ನೊಂದು ಹೆಸರೇ ಕರ್ಣ" – ಈ ಮಾತು ಕರ್ಣನಿಗೆ ಹೇಗೆ ಒಪ್ಪುತ್ತದೆ ? ವಿವರಿಸಿ.

---



Downloaded From : http://cbseportal.com/ Courtesy : CBSE

Downloaded From : http://cbseportal.com/

13

12

Downloaded From : http://cbseportal.com/ Courtesy : CBSE